# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕಾರವಾರ

ಸಿ.ಸಿ. ನಂಃ 2853/2024

KRPS Cri No. 52/2024

ಫಿರ್ಯಾದಿ : ಸರ್ಕಾರಃ ಕಾರವಾರ ಗ್ರಾಮೀಣ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : ದಯಾನಂದ ನಾಗೇಶ ಪೆಡ್ನೇಕರ

## **ದೋಷಾರೋಪಣೆ**

ನಾನು ಶ್ರೀ ಗಣೇಶ ಪಡಿಯಾರ ಯು., ಬಿ.ಕಾಂ.,ಎಲ್.ಎಲ್.ಬಿ. ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕಾರವಾರ ಆದ ನಾನು,

ದಯಾನಂದ ನಾಗೇಶ ಪೆಡ್ನೇಕರ

ವಯಸ್ಸುಃ 72 ವರ್ಷ, ವೃತ್ತಿಃ ವ್ಯಾಪಾರ,

ಸಾಃ ಇಂಡಸ್ಟ್ರಿಯಲ್ ಏರಿಯಾ, ಶಿರವಾಡ, ಕಾರವಾರ.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಪ್ರಸ್ತುತ ಪ್ರಕರಣದ ಆರೋಪಿಯಾದ ನೀವು ದಿಃ05.10.2024 ರಂದು ಸುಮಾರು 19.50 ಗಂಟೆಯ ಸಮಯಕ್ಕೆ ಕಾರವಾರ ಗ್ರಾಮೀಣ ಪೊಲೀಸ್ ಠಾಣಾ ಸರಹದ್ದಿನ ಕಾರವಾರ ತಾಲೂಕಿನ ಶಿರವಾಡ ಗ್ರಾಮದ ಇಂಡಸ್ಟ್ರಿಯಲ್ ಏರಿಯಾದಲ್ಲಿ ನಿಮ್ಮ ಬಳಿ ಯಾವದೇ ಪಾಸ್ ಅಥವಾ ಪರ್ಮಿಟ್ ಇಲ್ಲದೇ ಗೋವಾ ರಾಜ್ಯದಲ್ಲಿ ತಯಾರಾದ (1) LIGHT HORSE WHISKY For sale in Goa Only ಅಂತಾ ಲೇಬಲ್ ಇದ್ದ 750ML ಅಳತೆಯ ಒಟ್ಟು 6 ಪ್ಲಾಸ್ಟೀಕ್ ಬಾಟಲಿಗಳು (2) LIGHT HORSE WHISKY For sale in Goa Only ಅಂತಾ ಲೇಬಲ್ ಇದ್ದ 180ML ಅಳತೆಯ ಒಟ್ಟು 3 ಪ್ಲಾಸ್ಟೀಕ್ ಬಾಟಲಿಗಳು (3) GOA SPECIAL PALM FENNY For sale in Goa Only ಅಂತಾ ಲೇಬಲ್ ಇದ್ದ 750 ML ಅಳತೆಯ ಒಟ್ಟು 1 ಪ್ಲಾಸ್ಟೀಕ್ ಬಾಟಲಿ, (4) GOA SPECIAL PALM FENNY For sale in Goa Only ಅಂತಾ ಲೇಬಲ್ ಇದ್ದ 180 ML ಅಳತೆಯ ಒಟ್ಟು 2 ಪ್ಲಾಸ್ಟೀಕ್ ಬಾಟಲಿಗಳು, ಈ ಪ್ರಕಾರ ಒಟ್ಟೂ 1700/- ರೂಪಾಯಿ ಕಿಮ್ಮತ್ತಿನ 12 ಗೋವಾ ಸರಾಯಿ

ಬಾಟಲಿಗಳನ್ನು ದುಪ್ಪಟ್ಟು ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ನಿಮ್ಮ ವಶದಲ್ಲಿ ಇಟ್ಟುಕೊಂಡು, ಆ ಮೂಲಕ ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿ** ಶಿಕ್ಷಿಸಲ್ಪಡುವ ಆಪಾದನೆಯನ್ನು ಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಸದರಿ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿದ್ದು, ನೀವು ಸದರಿ ಆಪಾದನೆಗಳ ಕುರಿತಂತೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆಃ 1 ಮೇಲೆ ಓದಿ ಹೇಳಿದ ದೋಷಾರೋಪಣೆಗಳು ನಿಮಗೆ ತಿಳಿಯಿತೇ ?

ಉತ್ತರಃ

ಪ್ರಶ್ನೆಃ 2 ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಗೆ ಒಳಪಡುವಿರೋ ?

ಉತ್ತರಃ

(ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರಗಳನ್ನು ಬರೆದುಕೊಳ್ಳಲಾಯಿತು)

Sd/-

**ಕಾರವಾರ** **ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ದಿಃ 22.02.2025** **ಮತ್ತು ಜೆ.ಎಂ.ಎಫ್.ಸಿ., ಕಾರವಾರ**